# ಪರ್ಫೆಕ್ಟ್ ಬಾಡಿ ಎಂಬ ಮಾಯಾಜಿಂಕೆ

■ ಎನ್. ಸಂಧ್ಯಾರಾಣಿ
ಲೇಖಕಿ ಸಿನಿಮಾ ಬರಹಗಾರ್ತಿ

ಅವಳು ಬೊಂಬೆಯಂತಹ ಹುಡುಗಿ. ನನ್ನ ಗೆಳತಿಯ ಮಗಳು. ನಾಲ್ಕನೆಯದೋ ಐದನೆಯದೋ ಕ್ಲಾಸಿನಲ್ಲಿ ಓದುತ್ತಿದ್ದಳು. ಎತ್ತರದ ಹಣೆ, ದುಂಡುದುಂಡು ಕೆನ್ನೆ, ಹೊಳೆಯುವ ಕಣ್ಣುಗಳು, ಹಿಂದಿನಟಿ ಮುಮ್ತಾಜ್‌ಗಿದ್ದಂತಹ ಅದೇ ಮುದ್ದಾದ ಮೊಂಡು ಮೂಗು. ನನಗಂತೂ ಅವಳನ್ನು ಕಂಡರೆ ಇನ್ನಿಲ್ಲದ ಮುದ್ದು.

ಅವಳ ಅಮ್ಮ ಆಫೀಸಿನಿಂದ ಬರುವುದು ತಡವಾದ ದಿನ ನಮ್ಮ ಮನೆಯಲ್ಲಿ ಬಂದಿರುತ್ತಿದ್ದಳು. ಇಂತಹುದೇ ಒಂದು ಸಂಜೆ ಈ ಬೊಂಬೆ ನಮ್ಮ ಮನೆಯ ಕನ್ನಡಿಯಲ್ಲಿ ತುಂಬಾ ಗಂಭೀರವಾಗಿ ತನ್ನ ಮುಖ ನೋಡಿಕೊಳ್ಳುತ್ತಿತ್ತು. ಅವಳಿಗೆ ಯಾವಾಗಲೂ ಕನ್ನಡಿ ಎಂದರೆ ಮೋಹವೇ. ಹಾಗಾಗಿ ನಾನು ನಕ್ಕು ಸುಮ್ಮನಾಗಿದ್ದೆ. ಸ್ವಲ್ಪ ಹೊತ್ತಿನ ನಂತರ ಬಂದು ಮೆಲುದನಿಯಲ್ಲಿ ಕೇಳಿದಳು, 'ಆಪರೇಷನ್ ಮಾಡಿಸಿಕೊಂಡರೆ ನನ್ನ ಮೂಗು ಸರಿಹೋಗುತ್ತದಾ ಆಂಟಿ?' ನನಗೆ ಒಂದು ಕ್ಷಣ ಏನು ಯೋಚಿಸಬೇಕು ಎನ್ನುವುದು ಸಹ ಹೊಳೆಯಲಿಲ್ಲ. ಆಪರೇಶನ್ ಇರಲಿ, ಮೂಗು 'ಸರಿ' ಇಲ್ಲ ಎನ್ನುವುದನ್ನು ಈ ಪುಟಾಣಿಯ ತಲೆಯಲ್ಲಿ ತುಂಬಿದ್ದು ಯಾರಪ್ಪ ಎಂದು ಆಘಾತಕ್ಕೆ ಒಳಗಾಗಿದ್ದೆ. ಆಮೇಲೆ ತಮಾಷೆ ಮಾಡಿ, ಕೂಸಿಗೊಂದು ಕಥೆ ಹೇಳಿ ಅದನ್ನು ಮರೆಸಿದ್ದೆ.

ಸುಮಾರು 15 ವರ್ಷಗಳ ಹಿಂದೆ ನಡೆದ ಆ ಘಟನೆ ನೆನಪಾಗಿದ್ದು ಮೊನ್ನೆಮೊನ್ನೆ ಇಂತಹುದೇ ಇನ್ನೊಂದು ಬೊಂಬೆಯಂತಹ ಹುಡುಗಿ ಚೇತನಾ ರಾಜ್ ಸಾವಿನ ದಿನ. ಆದರೆ ಈಸಲ ಚೇತನಾ ಸೋ ಕಾಲ್ಡ್ ದೇಹ ಸೌಂದರ್ಯಕ್ಕಾಗಿ ಆಪರೇಷನ್ ಟೇಬಲ್ ಏರಿದ್ದಳು ಎನ್ನುವುದನ್ನು ತಿಳಿದಾಗ ಆಗಿನಂತೆ ಶಾಕ್ ಆಗಲಿಲ್ಲ. 'ಪರ್ಫೆಕ್ಟ್ ಬಾಡಿ' ಎನ್ನುವ ಮಾಯಾಜಿಂಕೆ ಎಷ್ಟೆಲ್ಲಾ ಹುಡುಗಿಯರನ್ನು ರೇಖೆ ದಾಟಿಸುತ್ತಿದೆ ಎನ್ನುವ ವಿಷಯ ಈಗ ನನ್ನಲ್ಲಿ ಹುಟ್ಟಿಸುವುದು ಆಘಾತವನ್ನಲ್ಲ, ವಿಷಾದ ಮಾತ್ರ.

ಹಳೆಮೈಸೂರು ಕಡೆಯ ನಮ್ಮ ವಯಸ್ಸಿನವರಿಗೆಲ್ಲಾ ತಪ್ಪದೆ ನೆನಪಿರುವ ಚಿತ್ರ ಎಂದರೆ ಪಟ್ಟದ ಗೊಂಬೆಗಳು. ವಿಜಯದಶಮಿಗೆ ಹೊರಬರುತ್ತಿದ್ದ ಈ ಕಪ್ಪು ಮರದ ಗೊಂಬೆಗಳು ಆಮೇಲೆ ದೇವರಗೂಡಿನಲ್ಲೋ, ನೆಲುವಿನ ಮೇಲೋ, ಪೆಟ್ಟಿಗೆಯೊಳಗಡೆಯೋ ಕೂರುತ್ತಿದ್ದವು. ರಂಗುರಂಗಿನ ತುಂಡುಬಟ್ಟೆ ಹುಡುಕಿ ಹೆಣ್ಣು ಬೊಂಬೆಗೆ ಸೀರೆ ಉಡಿಸುತ್ತಿದ್ದೆವು, ಗಂಡು ಬೊಂಬೆಗೆ ಪೇಟ ಸುತ್ತುತ್ತಿದ್ದೆವು. ಆ ಗೊಂಬೆಯ ಬಣ್ಣ, ಎತ್ತರ, ಮೈಮಾಟ ಇವು ಯಾವುವೂ 'ಅಸಾಮಾನ್ಯ'ವಾಗಿರಲಿಲ್ಲ. ಆಗೆಲ್ಲಾ ದುಂಡು ಮೈಮಾಟದ ಹೀರೊಯಿನ್‌ಗಳನ್ನು ಸಹ ಜನರು ಸುಲಭವಾಗಿ ಒಪ್ಪಿಕೊಳ್ಳುತ್ತಿದ್ದರು(!). ಮಕ್ಕಳನ್ನು ಹೆತ್ತ ನಾಯಕಿಯ ಹೊಟ್ಟೆ ದೋಸೆ ಕಾವಲಿಯಂತೆ ಸಪಾಟಾಗಿರಬೇಕು ಎನ್ನುವ ಹುಚ್ಚು ಬೆಂಚ್ ಮಾರ್ಕ್‌ಗಳು ಇರುತ್ತಿರಲಿಲ್ಲ.

ನೆನಪು ಮಾಡಿಕೊಳ್ಳಿ, ಬಹುಮಟ್ಟಿಗೆ ನಮ್ಮ ಅಮ್ಮಂದಿರು ಅವರ ಮೈಮಾಟದ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳುತ್ತಿರಲಿಲ್ಲ. ಅವರ ಹೆಣ್ತನ 'ಮಾದರಿ'ಯಾಗಿರಬೇಕಾದರೆ



ದೇಹದ ಕುರಿತಾದ ಟೀಕೆಗಳನ್ನು ದಿಟ್ಟವಾಗಿ ಎದುರಿಸಿ ಬಾಲಿವುಡ್‌ನಲ್ಲಿ ತಮ್ಮತನದ ಛಾಪು ಒತ್ತಿದ ವಿದ್ಯಾ ಬಾಲನ್

